

بسم اللهِ الرّحمٰن الرّحيم

# ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಅವರ ಉನ್ನತ ಮಟ್ಟದ ಸ್ವಭಾವ ಗುಣಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 13–11–2015 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹುರವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಇದ್ದ ಪ್ರೇಮದ ಕುರಿತು ಪ್ರತಿಯೊಬ್ಬ ಅಹ್ಮದಿ ಓದಿ ಅಥವಾ ಆಲಿಸಿ ಸ್ವಲ್ಪ ಮಟ್ಟಿಗೆ ತಿಳಿದಿರಬಹುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅಲ್ಲಾಹನಿಗೋಸ್ಕರ ಮಾತ್ರ ಸಂಬಂಧ ಸ್ಥಾಪಿಸಿದ ಬಗ್ಗೆ ಯಾವುದಾದರೊಂದು ಉದಾಹರಣೆ ನೀಡಬಹುದಾಗಿದ್ದರೆ ಅದು ಹಝ್ರತ್ ಮೌಲಾನ ನೂರುದ್ದೀನ್ ರಝಿಯಲ್ಲಾಹು ಅನ್‌ಹುರವರದ್ದೇ ಆಗಿದೆ. ಎಲ್ಲ ಲೌಕಿಕ ಸಂಬಂಧಗಳಿಗಿಂತ ಉನ್ನತವಾದ ಸಂಬಂಧ ಸ್ಥಾಪಿಸಿ ಬೈಅತ್ ಪ್ರತಿಜ್ಞೆಗಳನ್ನು ಪಾಲಿಸಿದ ಉನ್ನತ ಮಟ್ಟದ ಮಾದರಿ ತೋರಿಸಿ ಅದರಲ್ಲಿ ಸ್ಥಿರವಾಗಿದ್ದ ಒಂದು ಉದಾಹರಣೆ ನೀಡಬಹುದಾಗಿದ್ದರೆ ಅದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಉದಾಹರಣೆ ಆಗಿದೆ. ಸೇವೆಯನ್ನು ಮಾಡುವ ಅಪ್ರತಿಮ ಉದಾಹರಣೆಯನ್ನು ಯಾರಾದರೂ ಸ್ಥಾಪಿಸಿದರೆ ಅದು ಹಝ್ರತ್ ಹಕೀಮುಲ್ ಉಮ್ಮತ್ ಮೌಲಾನ ನೂರುದ್ದೀನ್ ಸ್ಥಾಪಿಸಿದ್ದುದಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮುಂದೆ ಅತ್ಯಂತ ವಿನಯದಿಂದ ವರ್ತಿಸಿದ ಅತಿ ಉನ್ನತ ಉದಾಹರಣೆಯನ್ನು ಅಹ್ಮದಿಯಾ ಜಮಾಅತಿನ ಚರಿತ್ರೆಯಲ್ಲಿ ನಾವು ಕಾಣುವುದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಅವರಲ್ಲಾಗಿದೆ. ಅದೇರೀತಿ ಅವರು ಇಮಾಮುಝ್ಝಮಾನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ಎಂತಹ ಗೌರವ ಪಡೆದರೆಂದರೆ ಅದು ಬೇರೆ ಯಾರಿಗೂ ದೊರಕಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಬಗ್ಗೆ ಹೇಳಿದರು:

**ಚೆ ಖುಶ್ ಬೂದೆ ಅಗರ್ ಹರ್ ಏಕಝ್ ಉಮ್ಮತ್ ನೂರುದ್ದೀನ್ ಬೂದೆ.**

ಈ ಸಮುದಾಯದ ಪ್ರತಿಯೊಬ್ಬ ವ್ಯಕ್ತಿ ನೂರುದ್ದೀನ್ ಆಗಿದ್ದರೆ ಎಷ್ಟು ಸಂತೋಷವಾಗುತ್ತಿತ್ತು!

ಇದು ಬಹಳ ಮಹತ್ತಾದ ಗೌರವವಾಗಿದೆ. ಈ ಕಾಲಘಟ್ಟದ ಇಮಾಮರು ತನ್ನನ್ನು ನಂಬುವವರಿಗೆ ಪ್ರತಿಯೊಂದರ ಉನ್ನತ ಮಟ್ಟ, ಹಝ್ರತ್ ನೂರುದ್ದೀನ್ ರಝಿಯಲ್ಲಾಹು ಅನ್‌ಹುರವರ ಉನ್ನತ ಮಟ್ಟವನ್ನು ಮಾದರಿಯಾಗಿ ಮಾಡಿದರು. ಪ್ರತಿಯೊಬ್ಬ ನೂರುದ್ದೀನ್ ಆಗಿ ಬಿಟ್ಟರೆ ಒಂದು ಕ್ರಾಂತಿ ಸಂಭವಿಸುವುದು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಹಝ್ರತ್ ಹಕೀಮ್ ಮೌಲಾನ ನೂರುದ್ದೀನ್ ರಝಿಯಲ್ಲಾಹು ಅನ್‌ಹುರವರಿಗೆ ಸಂಬಂಧಿಸಿದ ಕೆಲವು ಘಟನೆಗಳನ್ನೂ ವಿವರಿಸಿದ್ದಾರೆ. ಈ ಘಟನೆಗಳನ್ನು ಓದುವಾಗ ಯಜಮಾನ ಮತ್ತು ಸೇವಕ, ಗುರು–ಶಿಷ್ಯರ ಮಧ್ಯೆ ಎರಡು ಕಡೆಯಿಂದಲೂ ಇದ್ದ ಸಂಬಂಧ ಮತ್ತು ಪ್ರೀತಿಯ ಉದಾಹರಣೆಗಳು ಕಾಣಿಸುತ್ತವೆ. ವಿನಯ ಮತ್ತು ನಮ್ರತೆಯ ಉದಾಹರಣೆಗಳು ಕಾಣಸಿಗುತ್ತವೆ. ನಿಷ್ಠೆ ಮತ್ತು ಅನುಸರಣೆಯ ಉದಾಹರಣೆಗಳೂ ಕಾಣಿಸುತ್ತವೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ತ್ಯಾಗಗಳ ಉನ್ನತ ಮಟ್ಟ ಮತ್ತು ಅನುಸರಣೆಯ ಶ್ರೇಷ್ಠ ಮಟ್ಟವನ್ನು ಪ್ರಸ್ತಾಪಿಸುತ್ತಾ ಒಂದು ಸ್ಥಳದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಖಾದಿಯಾನಿಗೆ ಬಂದ ನಂತರ ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಹೀಗೆ ಹೇಳಿದರು: ನನಗೆ ನಿಮ್ಮ ಬಗ್ಗೆ ಹೀಗೆ ಇಲ್‌ಹಾಮ್ ಲಭಿಸಿದೆ – 'ನೀವು ಊರಿಗೆ ಮರಳಿ ಹೋದರೆ ನೀವು ನಿಮ್ಮ ಗೌರವವನ್ನು ಕಳೆದು ಕೊಳ್ಳುವಿರಿ.'

ಈ ಮಾತು ಆಲಿಸಿದ ನಂತರ ಅವರು ತನ್ನ ಊರಿಗೆ ಹೋಗುವ ಯೋಚನೆಯನ್ನೇ ಮಾಡಲಿಲ್ಲ. ಆ ಸಮಯದಲ್ಲಿ ಅವರು ತನ್ನ ಊರಾದ ಭೇರದಲ್ಲಿ ಒಂದು ಭವ್ಯ ಭವನ ನಿರ್ಮಿಸುತ್ತಿದ್ದರು. ಕೆಲವು ಸ್ನೇಹಿತರು ಹೇಳಿದರು: ನೀವು ಒಮ್ಮೆಯಾದರೂ ಊರಿಗೆ ಹೋಗಿ ಆ ಭವನವನ್ನು ನೋಡಿ ಬನ್ನಿರಿ ಎಂದು. ಆಗ ಅವರು ಹೇಳಿದರು: ನಾನು ಅಲ್ಲಾಹನಿಗೋಸ್ಕರ ಅದನ್ನು ಬಿಟ್ಟು ಬಿಟ್ಟಿದ್ದೇನೆ. ಇನ್ನು ಅದನ್ನು ನೋಡುವ ಆವಶ್ಯಕತೆ ಏನಿದೆ?

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಘಟನೆಯನ್ನು ಹೀಗೆ ವಿವರಿಸಿದ್ದಾರೆ: ಅಹ್ಮದಿಯಾ ಜಮಾಅತಿನ ಆಡಳಿತೆಯನ್ನು ಮಾಡುತ್ತಿದ್ದ ಅಂಜುಮನ್ ಸಮಿತಿಯ ಕೆಲವು ಮುಖ್ಯ ವ್ಯಕ್ತಿಗಳು ತಾವು ಬಹಳ ಬುದ್ಧಿಶಾಲಿಗಳೆಂದು ಭಾವಿಸುತ್ತಿದ್ದರು. ಲೌಕಿಕತೆ ಅವರನ್ನು ಪ್ರಭಾವಿಸುತ್ತಿತ್ತು. ಅನೇಕ ವಿಷಯಗಳು ಅಂಜುಮನ್‌ನಲ್ಲಿ ಚರ್ಚಿಸಲ್ಪಡುವಾಗ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಮತ್ತು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಅಭಿಪ್ರಾಯಗಳು ಒಂದೇ ರೀತಿ ಇರುತ್ತಿತ್ತು. ಬೇರೆ ಕೆಲವು ಮುಖ್ಯ ಸದಸ್ಯರ ಅಭಿಪ್ರಾಯ ಬೇರೆಯಾಗಿರುತ್ತಿತ್ತು. ಒಮ್ಮೆ, ತಅ್‌ಲೀಮುಲ್ ಇಸ್ಲಾಮ್ ಹೈಸ್ಕೂಲನ್ನು ಮುಚ್ಚಿಬಿಡಬೇಕೆಂಬ ವಿಷಯ ಚರ್ಚೆಗೆ ಬಂದಿತು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಅದನ್ನು ಮುಚ್ಚಿ ಬಿಡುವುದನ್ನು ವಿರೋಧಿಸಿದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಸಹ ಅದನ್ನು ಮುಚ್ಚಬಾರದೆಂದು ಅಭಿಪ್ರಾಯ ಹೊಂದಿದ್ದರು. ಈ ವಿಷಯದ ಬಗ್ಗೆ ಬಹಳ ತೀವ್ರ ವಾಗ್ವಾದಗಳು ನಡೆದುವು. ಕೊನೆಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ತೀರ್ಪಿಗೋಸ್ಕರ ಈ ವಿಷಯವನ್ನು ಇರಿಸಬೇಕಾಗಿತ್ತು. ಹಝ್ರತ್ ಮುಸ್ಲಿಹ್ ಮೌಊದ್ ಹೇಳುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೊಂದಿದ್ದ ಗೌರವದ ಕಾರಣ ಅವರ ಎದುರಿಗೆ ಮಾತನಾಡಲು ಹಿಂಜರಿಯುತ್ತಿದ್ದರು. ಆದುದರಿಂದ ಅವರು ನನ್ನನ್ನು ಅವರ ಆಯುಧವಾಗಿ ಮಾಡಿಕೊಳ್ಳುತ್ತಿದ್ದರು. ಅವರು ನನಗೆ ವಿಷಯವನ್ನು ಹೇಳಿಕೊಡುತ್ತಿದ್ದರು. ನಾನು ಅದನ್ನು ಹಝ್ರತ್ ಮಸೀಹ್ ಮೌಊದ್

ಅಲೈಹಿಸ್ಸಲಾಮರಿಗೆ ತಲಪಿಸುತ್ತಾ ಇದ್ದೆ. ಕೊನೆಗೆ ಅಲ್ಲಾಹನು ನಮಗೆ ಜಯ ನೀಡಿದನು. ಈ ಘಟನೆಯಿಂದ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾತನಾಡುವಾಗ ತೋರಿಸುತ್ತಿದ್ದ ಗೌರವ ಮತ್ತು ಶಿಷ್ಟಾಚಾರದ ಬಗ್ಗೆ ತಿಳಿಯುತ್ತದೆ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಬುದ್ಧಿಶಾಲಿತ್ವವನ್ನೂ ಅವರಿಗಿದ್ದ ವಿಶ್ವಾಸವನ್ನೂ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಬರೆಯುತ್ತಾರೆ: ವ್ಯಕ್ತಿಗಳಿಂದ ಜನಾಂಗಗಳು ರೂಪಿಸಲ್ಪಡುತ್ತವೆ. ಜನಾಂಗಗಳಿಂದ ವ್ಯಕ್ತಿಗಳೂ ರೂಪಿಸಲ್ಪಡುತ್ತಾರೆ. ಉನ್ನತ ಮಟ್ಟದ ಬುದ್ಧಿಶಾಲಿಗಳಾದ ಜನರಿಂದ ಮತ್ತು ಸಾತ್ವಿಕರಾದ ಜನರಿಂದ ಜನಾಂಗಗಳಿಗೆ ಬಹಳ ಲಾಭ ಉಂಟಾಗುತ್ತದೆ. ಶ್ರೇಷ್ಠ ಮತ್ತು ಒಳ್ಳೆಯ ಉದ್ದೇಶ ಲಕ್ಷ್ಯಗಳು ಒಳ್ಳೆಯ ಮತ್ತು ಸಕ್ರಿಯಯರಾದ ಜನರ ಕೈಗಳಲ್ಲಿ ಹೆಚ್ಚು ಲಾಭದಾಯಕವಾಗುತ್ತವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ಥಾಪಿಸಿದ ಜಮಾಅತಿನೊಂದಿಗೆ ಅಲ್ಲಾಹನು ಹೇಗೆ ವರ್ತಿಸಿದನೆಂದರೆ ಅವರ ವಾದದ ಆರಂಭದಲ್ಲಿಯೇ ವೈಯಕ್ತಿಕವಾಗಿ ಶ್ರೇಷ್ಠ ಗುಣಸಂಪನ್ನರೂ ಅತ್ಯುತ್ತಮ ಸೇವೆ ಮಾಡುವವರೂ ಆದ ಕೆಲವು ಜನರು ಅವರನ್ನು ನಂಬಿದರು. ಅಲ್ಲಾಹನು ಯಾವ ಕೆಲಸವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ವಹಿಸಿ ಕೊಟ್ಟನೋ ಆ ಕೆಲಸ ಮಾಡುವುದರಲ್ಲಿ ಅವರು ಸಹಾಯ ಮಾಡುವವರಾಗಿದ್ದರು. ಅಂತಹ ಜನರಲ್ಲಿ ಒಬ್ಬರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಆಗಿದ್ದರು.

ಒಬ್ಬನಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಕೆಟ್ಟ ಸಂಶಯವಿತ್ತು. ಅವರ ಗ್ರಂಥಗಳಲ್ಲಿ ಪ್ರವಾದಿತ್ವ ಜಾರಿಯಲ್ಲಿರುವ ಬಗ್ಗೆ ಅವನು ಓದಿದಾಗ ಅವನು ಕೆಲವು ಜನರನ್ನು ತನ್ನ ಜೊತೆ ಸೇರಿಸಿಕೊಂಡು ಉದ್ವೇಗಭರಿತನಾಗಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಬಳಿಗೆ ಬಂದು ಕೇಳಿದನು: ಒಬ್ಬನು ತನ್ನನ್ನು ಈ ಕಾಲದಲ್ಲಿ ನಬಿಯನ್ನಾಗಿ ಮಾಡಿ ಕಳುಹಿಸಲಾಗಿದೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರವೂ ಮುಸ್ಲಿಮ್ ಸಮುದಾಯದಲ್ಲಿ ಪ್ರವಾದಿತ್ವ ಜಾರಿಯಲ್ಲಿದೆ ಎಂದು ವಾದಿಸಿದರೆ ಅಂತಹ ವ್ಯಕ್ತಿಯ ಬಗ್ಗೆ ನೀವು ಏನು ಅಭಿಪ್ರಾಯ ಹೊಂದುವಿರಿ? ಆಗ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು: ಈ ಪ್ರಶ್ನೆಗೆ ಉತ್ತರ ವಾದಿಸುವವರ ಸ್ಥಿತಿಗೆ ಅನುಸಾರವಾಗಿರುತ್ತದೆ. ಆ ವ್ಯಕ್ತಿ ಈ ವಾದ ಮಾಡಲು ಅರ್ಹನೋ ಅಲ್ಲವೋ ಎಂದು ನೋಡಬೇಕು. ಹೀಗೆ ವಾದಿಸುವವನು ಸತ್ಯವಂತನಾಗಿರದಿದ್ದರೆ ಅವನನ್ನು ನಾವು ಸುಳ್ಳುವಾದಿ ಎಂದು ಹೇಳುವೆವು. ಹೀಗೆ ವಾದಿಸುವ ವ್ಯಕ್ತಿ ಸತ್ಯವಂತನಾಗಿದ್ದರೆ ನಾನು ಭಾವಿಸುವೆನು ವಾಸ್ತವಿಕವಾಗಿ ನಬಿ ಬರಬಹುದಾಗಿದೆ, ನಬಿ ಬರಲಾರರೆಂಬ ನನ್ನ ಅಭಿಪ್ರಾಯ ತಪ್ಪಾಗಿದೆ ಎಂದು ಭಾವಿಸುವೆನು. ಮಿರ್ಝಾ ಸಾಹೇಬರು ಬರೆದುದು ನಿಸ್ಸಂದೇಹವಾಗಿಯೂ ಸತ್ಯವಾಗಿದೆ. ನನಗೆ ಅದರ ಬಗ್ಗೆ ನಂಬಿಕೆ ಇದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರ ಒಬ್ಬ ಸಹೋದರಿ ಒಬ್ಬ ಪೀರರ ಶಿಷ್ಯೆಯಾಗಿದ್ದರು. ಆಕೆ ಖಾದಿಯಾನಿಗೆ ಬಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್ ಮಾಡಿದರು. ಆಕೆ ಮರಳಿ ಹೋದಾಗ ಆಕೆಯ ಪೀರ್ ಸಾಹೇಬ್ ಕೇಳಿದರು: ನೀನು ಮಿರ್ಝಾ ಸಾಹೇಬರ ಬೈಅತ್ ಏಕೆ ಮಾಡಿದೆ? ಆಕೆ ಹೇಳಿದರು: ನಾನು ಮಿರ್ಝಾ ಸಾಹೇಬರನ್ನು ನಂಬಿದುದು ಏಕೆಂದರೆ ನಾನು ನಂಬದೇ ಇದ್ದರೆ ಖಿಯಾಮತ್ ದಿನದಂದು ನನಗೆ ಚಪ್ಪಲಿ ಏಟು ಸಿಗುತ್ತಿತ್ತು. ಆ ದಿನ ನೀವು ಏನು ಮಾಡುವಿರೆಂದು ನನಗೆ ಹೇಳಿರಿ. ಆ ಪೀರ್ ಹೀಗೆ ಹೇಳಿದರು – ಓಹೋ ಇದನ್ನು ನೂರುದ್ದೀನ್ ನಿನಗೆ ಹೇಳಿಕೊಟ್ಟು ನನ್ನ ಬಳಿಗೆ ಕಳುಹಿಸಿದ್ದಾನೆ. ಇದು ಆತನ ಕುತಂತ್ರವಾಗಿದೆ. ನೀನು ಗಾಬರಿಗೊಳ್ಳಬೇಕಾಗಿಲ್ಲ. ಖಿಯಾಮತ್ ದಿನ ಸಿರಾತೆ ಮುಸ್ತಖೀಮ್ ಸೇತುವೆ ಬಳಿ ಜನರು ಜಮಾಯಿಸುವರು ಆಗ ನಿನ್ನ ಪಾಪಗಳನ್ನೆಲ್ಲಾ ನಾನು ಎತ್ತಿಕೊಳ್ಳುವೆನು. ನೀನು ಒಯ್ಯಾರದಿಂದ ಜನ್ನತ್‌ಗೆ ಹೋಗುವೆ. ಆಗ ಆಕೆ ಹೇಳಿದರು: ಪೀರ್ ಸಾಹೇಬ್, ನಾವು ಸ್ವರ್ಗಕ್ಕೆ ಪ್ರವೇಶಿಸಿದ ನಂತರ ನಿಮ್ಮ ಸ್ಥಿತಿ ಏನಾಗುವುದು? ಪೀರ್ ಹೀಗೆ ಉತ್ತರ ಹೇಳಿದ: ಮಲಾಯಿಕ (ದೇವದೂತರು) ನನ್ನ ಬಳಿ ಬರುವಾಗ ನಾನು ಕಣ್ಣು ಕೆಂಪಗೆ ಮಾಡಿ ಹೇಳುವೆನು– ನಮ್ಮ ತಾತ ಇಮಾಮ್ ಹುಸೈನರ ಶಹಾದತ್ ಸಾಕಾಗಲಿಲ್ಲವೇ. ಈ ದಿನ (ಖಿಯಾಮತ್ ದಿನ) ನಮ್ಮನ್ನು ಸತಾಯಿಸುತ್ತಾ ಇರುವುದು ಏಕೆ? ಎಂದು ಕೇಳುವೆ. ನನ್ನ ಮಾತು ಆಲಿಸಿದ ಕೂಡಲೆ ದೇವದೂತರು ನಾಚಿಕೆಗೊಂಡು ಓಡಿ ಹೋಗುವರು. ನಾವು ನೆಗೆದು ಸ್ವರ್ಗ ಪ್ರವೇಶಿಸುವೆವು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಸರಳತೆ ಮತ್ತು ಅನುಸರಣೆ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಸ್ಥಳದಲ್ಲಿ ಹೀಗೆ ಬರೆದಿದ್ದಾರೆ: ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮುಂದೆ ಬಹಳ ವಿನಮ್ರವಾಗಿ ಕುಳಿತು ಕೊಳ್ಳುತ್ತಿದ್ದರು. ಒಮ್ಮೆ ವಿವಾಹಗಳ ಬಗ್ಗೆ ಚರ್ಚೆ ನಡೆಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು: ಮೌಲವಿ ಸಾಹೇಬ್, ನಮ್ಮ ಜಮಾಅತ್ ವರ್ಧಿಸುವಂತೆ ಮಾಡುವ ಒಂದು ವಿಧಾನ ಹೆಚ್ಚು ಮಕ್ಕಳಾಗುವುದು ಆಗಿದೆ. ಆದುದರಿಂದ ನಮ್ಮ ಜಮಾಅತಿನ ಜನರು ಒಂದಕ್ಕಿಂತ ಹೆಚ್ಚು ಮದುವೆ ಆಗಬೇಕು. ಆಗ ನಮ್ಮ ಜಮಾಅತ್ ವರ್ಧಿಸುವುದು. ಆಗ ಹಝ್ರತ್ ಖಲೀಫತುಲ್ ಮಸೀಹ್, ಮೊಣಕಾಲ ಮೇಲಿರಿಸಿದ್ದ ತಲೆ ಎತ್ತಿ ಹೇಳಿದರು: ‘ಹುಝೂರ್, ನಾನು ತಮ್ಮ ಆಜ್ಞೆ ಅಂಗೀಕರಿಸಲು ಸಿದ್ಧನಾಗಿದ್ದೇನೆ. ಆದರೆ ನನ್ನ ಈ ಪ್ರಾಯದಲ್ಲಿ ನನಗೆ ಯಾರೂ ಹೆಣ್ಣು ಕೊಡಲಾರರು.’ ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಕ್ಕರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಈ ವಿನಯ ಅವರು ತೋರಿಸುತ್ತಿದ್ದ ಗೌರವದ ಕಾರಣದಿಂದಾಗಿತ್ತು. ಆದುದರಿಂದ ಅವರಿಗೆ ಉತ್ತಮ ಪದವಿ ದೊರಕಿತು. ಅಲ್ಲಹನು ಅವರ ಆಧ್ಯಾತ್ಮಿಕ ಸ್ಥಾನ ವರ್ಧಿಸಲಿ. ಲೋಕದ ಜನರೆಲ್ಲರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ವಿರೋಧಿಸುತ್ತಿದ್ದಾಗ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಅವರನ್ನು ನಂಬಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜಮಾಅತನ್ನು ವರ್ಧಿಸಲು ಒಂದು ಮಾರ್ಗ ಹೆಚ್ಚು ಮಕ್ಕಳನ್ನು ಹೊಂದುವುದು ಎಂದು ಹೇಳಿದುದಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಮಕ್ಕಳ ವಿವಾಹದ ಬಗ್ಗೆ ನಿರ್ಧರಿಸುವಾಗ ಹೀಗೆ ಪ್ರಶ್ನೆ ಕೇಳುತ್ತಿದ್ದರು– ಆ ವ್ಯಕ್ತಿಗೆ ಎಷ್ಟು

ಮಕ್ಕಳಿದ್ದಾರೆ. ಅವರ ಅಣ್ಣ ತಮ್ಮಂದಿರೆಷ್ಟು? ಅವರ ಮಕ್ಕಳೆಷ್ಟು? ಇತ್ಯಾದಿ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನನ್ನೊಂದಿಗೆ ಯಾರಾದರೂ ವಿವಾಹಕ್ಕೆ ಸಂಬಂಧಿಸಿ ಸಲಹೆ ಕೇಳಿದರೆ ನಾನು ಸಹ ಹೀಗೆ ಸಲಹೆ ನೀಡುತ್ತೇನೆ. ನೀವು ಎಲ್ಲಿ ವಿವಾಹ ಸಂಬಂಧ ಸ್ಥಾಪಿಸಲು ಬಯಸುತ್ತೀರೋ ಅಲ್ಲಿ ಮಕ್ಕಳೆಷ್ಟಿದ್ದಾರೆ ಎಂದು ನೋಡಿರಿ.

ಇಂದಿನ ಕಾಲದಲ್ಲಿ ಫ್ಯಾಮಿಲಿ ಪ್ಲಾನಿಂಗ್ (ಕುಟುಂಬ ನಿಯಂತ್ರಣ) ಬಗ್ಗೆ ಬಹಳ ಪ್ರಚಾರವಿದೆ. ಆದರೆ ಇದರ ಬಗ್ಗೆ ಹೆಚ್ಚು ತೀವ್ರ ಪ್ರಚಾರ ನಡೆದ ದೇಶಗಳಲ್ಲಿ ತಮ್ಮ ಧೋರಣೆ ತಪ್ಪೆಂಬ ಅಭಿಪ್ರಾಯ ಮೂಡಿ ಬರುತ್ತಿದೆ. ಪ್ರಕೃತಿ ನಿಯಮಗಳ ವಿರುದ್ಧ ಮನುಷ್ಯನು ಹೋರಾಡಲು ಪ್ರಯತ್ನಿಸುವಾಗ ಸಮಸ್ಯೆಗಳು ತಲೆದೋರುತ್ತವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರಿಗೆ ಸಂಬಂಧಿಸಿ ಇನ್ನೊಂದು ಸಂಭವ ಹೀಗೆ ವಿವರಿಸುತ್ತಾರೆ: ಅತಿಥಿಗಳಿಗೆ ಊಟ ತಯಾರಿಸಲು ಹಲವಾರು ವಸ್ತುಗಳನ್ನು ಸಂಗ್ರಹಿಸುವ ಆವಶ್ಯಕತೆ ಇತ್ತು. ಈ ಕೆಲಸವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮನೆಯ ಸೇವಕರೂ ಜಮಾಅತಿನ ಇತರ ಜನರೂ ಸೇರಿ ಮಾಡುತ್ತಿದ್ದರು. ಆಗ ಲಂಗರ್ ಖಾನ ವ್ಯವಸ್ಥಾಪಿತವಾಗಿರಲಿಲ್ಲ. ಸೌದೆ ಮೊದಲಾದವು ಬಂದರೆ ಒಳಗೆ ಹಾಕಲು ಮನೆಯ ಸೇವಕಿ ಬೊಬ್ಬೆ ಹೊಡೆದು ಹೇಳುತ್ತಿದ್ದಳು– ಸೌದೆ ಬಂದಿದೆ ಯಾರಾದರೂ ಬಂದು ಲಂಗರ್ ಖಾನದೊಳಗೆ ಸಾಗಿಸಿರಿ ಎಂದು. ಒಮ್ಮೆ ಬೆಂಕಿ ಹಚ್ಚಲು ಬಳಸುವ ಬೆರಣಿಯ ಒಂದು ಗಾಡಿ ಬಂತು. ಆಗ ಮಳೆ ಸುರಿಯುವ ಸ್ಥಿತಿ ಇತ್ತು. ಆಗ ಸೇವಕಿ ಸಹಾಯಕ್ಕೆ ಜನರನ್ನು ಕರೆದಾಗ ಯಾರೂ ಬರಲಿಲ್ಲ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಅದನ್ನು ಕಂಡರು. ಅವರು ಹೇಳಿದರು– 'ಇಂದು ನಾವೇ ಕೆಲಸಗಾರರಾಗುವೆವು' ಅವರು ಅದನ್ನು ಸಾಗಿಸಲು ತೊಡಗಿದರು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಇದ್ದ ಪ್ರೇಮದ ಬಗ್ಗೆ ವಿವರಿಸುತ್ತಾ ಹೀಗೆ ಹೇಳುತ್ತಾರೆ: ಅವರು ಬಹಳ ಸಂತೋಷಗೊಂಡಾಗ ಪ್ರೀತಿಯಿಂದ 'ನಮ್ಮ ಮಿರ್ಝಾರವರು ಹೀಗೆ ಹೇಳಿದರು' ಎಂದು ಪ್ರಸ್ತಾಪಿಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಾನು ಮಹ್‌ದೀ ಮಸೀಹ್ ಎಂದು ವಾದಿಸುವುದಕ್ಕೆ ಮೊದಲಿನ ಕಾಲದಲ್ಲಿ ಅವರೊಂದಿಗೆ ನಿಕಟ ಸಂಬಂಧ ಹೊಂದಿದ ಕಾರಣದಿಂದ ಅವರ ಬಗ್ಗೆ ಪ್ರೀತಿಯಿಂದ ಹಾಗೆ ಪ್ರಸ್ತಾಪಿಸುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಮಧ್ಯೆ ಎರಡು ಕಡೆಗಳಿಂದಲೂ ಇದ್ದ ಪ್ರೀತಿ ವಿಶ್ವಾಸದ ಒಂದು ಉದಾಹರಣೆ ಹೀಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಒಬ್ಬರು ಹೇಳಿದರು: ಹಝ್ರತ್ ಮೌಲವಿ ಸಾಹೇಬರು ಸಂಚಾರಕ್ಕೆ ಹೋಗುವುದಿಲ್ಲ ಎಂದು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಅವರು ಪ್ರತಿದಿನ ಹೋಗುತ್ತಾರೆ ಎಂದು. ಆಗ ಅವರಿಗೆ ಹೀಗೆ ತಿಳಿಸಲಾಯಿತು. 'ಮೌಲವಿ ಸಾಹೇಬರು ಸಂಚಾರಕ್ಕೆ ಹೊರಡುತ್ತಾರೆ. ಆದರೆ ದಾರಿ ಮಧ್ಯೆ ಮರದ ಕೆಳಗೆ ಕುಳಿತು ಕೊಳ್ಳುತ್ತಾರೆ. ಮರಳಿ ಬರುವಾಗ ಸೇರಿ ಕೊಳ್ಳುತ್ತಾರೆ.' ಅದರ ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಡೆದಾಡಲು ಹೋಗುವಾಗ ಯಾವಾಗಲೂ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರನ್ನು ಜೊತೆಗೇ ಕರೆದುಕೊಂಡು ಹೋಗುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವೇಗವಾಗಿ ನಡೆದು ಹೋಗುವಾಗ ಹಝ್ರತ್ ಖಲೀಫತುಲ್ ಮಸೀಹ್ ಹಿಂದೆ ಉಳಿಯುತ್ತಿದ್ದರು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಂತುಕೊಂಡು 'ಆ ವಿಷಯದ ಬಗ್ಗೆ ನೀವೇನು ಹೇಳುತ್ತೀರಿ' ಎಂದು ಏನಾದರೂ ಮಾತು ಪ್ರಾರಂಭಿಸುತ್ತಿದ್ದರು. ಮೌಲವಿ ಸಾಹೇಬರು ವೇಗವಾಗಿ ನಡೆದು ಅವರೊಂದಿಗೆ ಸೇರಿಕೊಂಡು ಮಾತನಾಡುತ್ತಾ ಮುಂದೆ ಸಾಗುತ್ತಿದ್ದರು. ಪುನಃ ಮೌಲವಿ ಸಾಹೇಬರು ಹಿಂದೆ ಉಳಿದಾಗ ಮತ್ತೆ ನಿಂತು ಕೇಳುತ್ತಿದ್ದರು. 'ಮೌಲವಿ ಸಾಹೇಬ್ ಈ ವಿಷಯದ ಬಗ್ಗೆ ನಿಮ್ಮ ಅಭಿಪ್ರಾಯವೇನು' ಆಗ ಮೌಲವಿ ಸಾಹೇಬರು ಪುನಃ ವೇಗವಾಗಿ ಮುಂದೆ ಸಾಗಿ ಮಾತನಾಡುತ್ತಿದ್ದರು. ಹೀಗೆ ಅನೇಕ ಸಾರಿ ಆಗುತ್ತಿತ್ತು. ಮೌಲವಿ ಸಾಹೇಬರಿಗೆ ವೇಗವಾಗಿ ನಡೆಯುವ ಅಭ್ಯಾಸವಾಗಲಿ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಮಾಡುತ್ತಿದ್ದರು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ನಿಷ್ಠೆ ಮತ್ತು ಅಲ್ಲಾಹನ ಬಗ್ಗೆ ಭರವಸೆಯ ಒಂದು ಉದಾಹರಣೆ ಹೀಗಿದೆ: ಹಝ್ರತ್ ಮೀರ್ ನಾಸಿರ್ ನವಾಬ್ ಸಾಹೇಬರು ಒಮ್ಮೆ ದೆಹಲಿಯಲ್ಲಿ ಕಠಿಣ ಕೋಲಿಕ್ ರೋಗಗ್ರಸ್ತರಾದರು. ಅವರ ರೋಗ ಉಪಶಮನಕ್ಕೆ ಶಸ್ತ್ರಚಿಕಿತ್ಸೆ ನಡೆಸಬೇಕೆಂದು ಡಾಕ್ಟರ್‌ಗಳು ಹೇಳಿದರು: ಆದರೆ ಯುನಾನಿ ಚಿಕಿತ್ಸೆ ಮೂಲಕ ಆಪರೇಶನ್ ಇಲ್ಲದೆ ರೋಗ ಶಮನವಾಗಬಹುದೆಂದು ಕೆಲವರು ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಖಲೀಫ ಅವ್ವಲ್‌ರವರಿಗೆ ತಂತಿ ಸಂದೇಶ ಕಳುಹಿಸಿ ತಕ್ಷಣ ಹೊರಡಲು ಆದೇಶಿಸಿದರು. ಆ ಸಂದೇಶ ಲಭಿಸುವಾಗ ಅವರು ಚಿಕಿತ್ಸಾಲಯದಲ್ಲಿದ್ದರು. ಕೋಟು ಸಹ ಹಾಕಿರಲಿಲ್ಲ. ಹಣವೂ ಇರಲಿಲ್ಲ. ಅವರು ಅಲ್ಲಿಂದಲೇ ಹಕೀಮ್ ಗುಲಾಮ್ ಮುಹಮ್ಮದರ ಜೊತೆಗೆ ಕಾಲು ನಡೆಯಾಗಿ ಬಟಾಲಕ್ಕೆ ತಲಪಿದರು. ಆಗ ಹಕೀಮ್ ಗುಲಾಮ್ ಮುಹಮ್ಮದ್ ಹೇಳಿದರು: ರೈಲು ಟಿಕೇಟಿಗೆ ಹಣವಿಲ್ಲ. ಏನು ಮಾಡುವುದು. ಆಗ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು: 'ಅಲ್ಲಾಹನೇ ಏನಾದರೂ ವ್ಯವಸ್ಥೆ ಮಾಡುವನು' ಎಂದು. ಅಲ್ಲಾಹನ ಬಗ್ಗೆ ಎಷ್ಟು ಭರವಸೆ ಅವರಿಗಿತ್ತು ಅದರ ಒಂದು ಉದಾಹರಣೆ ನೋಡಿರಿ. ಆಗ ಅಲ್ಲಿಗೆ ಒಬ್ಬ ವ್ಯಕ್ತಿ ಬಂದು ಕೇಳಿದರು: 'ಹಕೀಮ್ ನೂರುದ್ದೀನ್ ನೀವೇ ಅಲ್ಲವೆ?' ಹೌದೆಂದು ಹೇಳಿದಾಗ ಆ ವ್ಯಕ್ತಿ ಹೇಳಿದ: 'ರೈಲು ಬಂಡಿ ಬರಲು ಇನ್ನೂ ಹತ್ತು ಹದಿನೈದು ನಿಮಿಷ ಇದೆ. ನಿಮ್ಮನ್ನು ಕಾಯಲು ನಾನು ಸ್ಟೇಶನ್ ಮಾಸ್ತರೊಂದಿಗೆ ಹೇಳಿದ್ದೇನೆ. ನಾನು ಬಟಾಲದ ತಹ್‌ಸೀಲ್‌ದಾರನಾಗಿದ್ದೇನೆ. ನನ್ನ ಪತ್ನಿಗೆ ಕಠಿಣ ರೋಗವಿದೆ ನೀವು ನನ್ನೊಂದಿಗೆ ಬಂದು ಆಕೆಯನ್ನು ಪರೀಕ್ಷಿಸಿರಿ' ಎಂದು ಹೇಳಿದರು. ಅವರು ರೋಗಿಯನ್ನು ಪರೀಕ್ಷಿಸಿ ಚಿಕಿತ್ಸೆ ಸೂಚಿಸಿ ಸ್ಟೇಶನಿಗೆ ಮರಳಿ ಬಂದರು. ತಹ್‌ಸೀಲ್‌ದಾರ ಅವರಿಗೆ ರೈಲು ಟಿಕೇಟು ಖರೀದಿಸಿ ಕೊಟ್ಟರಲ್ಲದೆ ಐವತ್ತು ರೂಪಾಯಿ ನಗದಾಗಿ ನೀಡಿದರು. ಅವರು ದೆಹಲಿಗೆ ತಲಪಿ ಮೀರ್ ಸಾಹೇಬರಿಗೆ ಚಿಕಿತ್ಸೆ ನೀಡಿದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇದು ಯಥಾರ್ಥ ತವಕ್ಕುಲ್‌ಅಲಲ್ಲಾಹ್ ಆಗಿದೆ. ಸರಿಯಾಗಿ ತವಕ್ಕುಲ್ (ಅಲ್ಲಾಹನ ಬಗ್ಗೆ ಭರವಸೆ) ಹೊಂದಿದ ಜನರು ಯಾರಿಂದಲೂ

ಏನನ್ನೂ ಬೇಡುವುದಿಲ್ಲ. ಅಲ್ಲಾಹನು ಜನರನ್ನು ಅವರ ಕಡೆಗೆ ಲಕ್ಷ್ಯ ನೀಡುವಂತೆ ಸ್ವತಃ ಮಾಡುತ್ತಾನೆ. ಮತ್ತು ಅವರ ಆವಶ್ಯಕತೆ ಈಡೇರಿಸುವ ವ್ಯವಸ್ಥೆ ಮಾಡುತ್ತಾನೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರಿಗೆ ತವಕ್ಕುಲ್‌ನ ಅತ್ಯಂತ ಉನ್ನತ ಸ್ಥಾನ ಲಭಿಸಿತ್ತು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: 'ಒಬ್ಬ ವ್ಯಕ್ತಿ ನನ್ನೊಂದಿಗೆ ಹೇಳಿದರು: ನಾನು ರೋಗಿಯಾಗಿದ್ದಾಗ ಮೌಲವಿ ಸಾಹೇಬರಿಂದ ಚಿಕಿತ್ಸೆ ಮಾಡಿಸಿದೆ. ನನಗೆ ತುಂಬಾ ಲಾಭವಾಯಿತು.' ಆ ದಿನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ರೋಗಿಯಾಗಿದ್ದರು ಅವರಿಗೆ ಈ ಮಾತು ಕೇಳಿಸಿದಾಗ ಅವರು ಎದ್ದು ಕುಳಿತುಕೊಂಡು ಹೇಳಿದರು: ಅಲ್ಲಾಹನು ಸ್ವತಃ ಪ್ರೇರೇಪಿಸಿ ಮೌಲವಿ ಸಾಹೇಬರನ್ನು ಇಲ್ಲಿಗೆ ಕಳುಹಿಸಿದನು. ಸಾವಿರಾರು ಜನರು ಅವರಿಂದ ಲಾಭ ಪಡೆದಿದ್ದಾರೆ. ಮೌಲವಿ ಸಾಹೇಬರು ಇಲ್ಲಿಗೆ ಬರದೆ ಇರುತ್ತಿದ್ದರೆ ಈ ಜನರಿಗೆ ಚಿಕಿತ್ಸೆ ಹೇಗೆ ದೊರಕುತ್ತಿತ್ತು. ಮೌಲವಿ ಸಾಹೇಬರು ಇಲ್ಲಿರುವುದು ಅಲ್ಲಾಹನ ಔದಾರ್ಯವೇ ಆಗಿದೆ.

ಇದು ಅಲ್ಲಾಹನಿಗೆ ಕೃತಜ್ಞತೆ ಅರ್ಪಣೆಯಾಗಿತ್ತು. ಹೆಮ್ಮೆಯ ಮಾತಲ್ಲ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ವಿನಯ ಮತ್ತು ಅತ್ಯಂತ ಹೆಚ್ಚಿನ ಸರಳತೆ ಬಗ್ಗೆ ಒಬ್ಬ ಸಹಾಬಿ ಹೀಗೆ ಹೇಳುತ್ತಾರೆ– ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಸಂದರ್ಶಿಸಲು ಖಾದಿಯಾನ್‌ನಲ್ಲಿ ಮಸ್‌ಜಿದ್ ಮುಬಾರಕ್‌ಗೆ ಹೋದೆ. ಬಾಗಿಲಿನ ಹತ್ತಿರ ಪಾದರಕ್ಷೆಗಳು ಇದ್ದುವು. ಒಬ್ಬ ಸಾಮಾನ್ಯ ಬಟ್ಟೆ ಧರಿಸಿದ ವ್ಯಕ್ತಿ ಬಂದು ಪಾದರಕ್ಷೆಗಳ ಸಮೀಪ ಕುಳಿತುಕೊಂಡ. ಆಗ ನಾನು ಭಾವಿಸಿದೆ ಈತ ಪಾದರಕ್ಷೆ ಕದಿಯಲು ಬಂದವನಾಗಿರಬಹುದೆಂದು. ನಾನು ನನ್ನ ಪಾದರಕ್ಷೆ ಕದ್ದು ಹೋಗದಂತೆ ನಿಗಾವಹಿಸಿದೆ. ಅನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದ ನಂತರ ಒಬ್ಬರನ್ನು ಖಲೀಫರನ್ನಾಗಿ ಚುನಾಯಿಸಿದ ಸಮಾಚಾರ ತಿಳಿದು ನಾನು ಖಾದಿಯಾನಿಗೆ ಬಂದು ಬೈಅತ್ ಮಾಡುವಾಗ ನಾನು ನೋಡಿದೆ, ನಾನು ನನ್ನ ಅವಿವೇಕತನದಿಂದ ಪಾದರಕ್ಷೆ ಕಳ್ಳ ಎಂದು ಭಾವಿಸಿದ ವ್ಯಕ್ತಿಯೇ ಖಲೀಫರಾಗಿದ್ದಾರೆ. ನಾನು ಬಹಳ ನಾಚಿಕೆ ಹೊಂದಿದೆ.

ಅಲ್ಲಾಹನು ಅವರ ಆಧ್ಯಾತ್ಮಿಕ ಸ್ಥಾನಮಾನ ಉನ್ನತಗೊಳಿಸಲಿ. ಅವರ ಹೆಸರಲ್ಲಿ ಕಲಹ ಮಾಡುವವರಿಗೆ ಸಹ ಬುದ್ಧಿ ನೀಡಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗ್ರಹ ಪ್ರಕಾರ ಅವರ ಮಾದರಿಯಿಂದ ಪಾಠ ಕಲಿಯುವಂತೆ ಅಲ್ಲಾಹನು ನಮ್ಮನ್ನು ಮಾಡಲಿ.

ಇಂದು ಮೌರಿಶಸ್‌ನಲ್ಲಿ ಜಲ್ಸಾ ಸಾಲಾನ ಜರಗುತ್ತದೆ. ಅಲ್ಲಿ ಜಮಾಅತ್ ಸ್ಥಾಪಿತವಾಗಿ ಒಂದು ನೂರು ವರ್ಷಗಳಾದುವು. ಅವರು ತಮ್ಮ ಜಮಾಅತಿನ ಶತವಾರ್ಷಿಕ ಆಚರಿಸುತ್ತಿದ್ದಾರೆ. ಅವರ ಜಲ್ಸವನ್ನು ಅಲ್ಲಾಹನು ಎಲ್ಲ ರೀತಿಗಳಲ್ಲೂ ಅನುಗ್ರಹಿಸಲಿ. ಈ ಸಮಾರಂಭ ಮುಂದಿನ ಅಭಿವೃದ್ಧಿಗೆ ನಾಂದಿಯಾಗಲಿ. ಹಾಗೂ ಹೊಸದಾಗಿ ಯೋಜನೆ ಗಳನ್ನು ರೂಪಿಸುವಂತಾಗಲಿ. ಅಲ್ಲಿ ಕೆಲವು ಪಿತೂರಿಗಾರರು ಸಹ ಇದ್ದಾರೆ. ಅಲ್ಲಾಹನು ಜಮಾಅತನ್ನು ಅವರ ಕೆಡುಕುಗಳಿಂದ ರಕ್ಷಿಸಲಿ. ಎಲ್ಲ ಕೆಡುಕುಗಳಿಂದ ಜಮಾಅತನ್ನು ಅಲ್ಲಾಹನು ರಕ್ಷಿಸಲಿ. ಜಲ್ಸವನ್ನೂ ಅದರ ಕಾರ್ಯಕ್ರಮಗಳನ್ನೂ ಅಲ್ಲಾಹನು ಅನುಗ್ರಹಿಸುವವನಾಗಲಿ – ಆಮೀನ್.

————————————*****————————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 13-11-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon